ಸರ್ಕಾರಿ ಐಟಿಐ ಕಾಲೇಜು ಪ್ರಾರಂಭಿಸುವುದು

2071 (2464); ಶ್ರೀ ಅಖಂಡ ಶ್ರೀನಿವಾಸಮೂರ್ತಿ ಆರ್. (ಪುಲಕೇಶಿನಗರ)

ಅ) ಪುಲಕೇಶಿ ನಗರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಸರ್ಕಾರಿ ಐಟಿಐ ಕಾಲೇಜು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಪುಲಕೇಶಿ ನಗರ ವಿಧಾನ ಸಭಾ ಕ್ಷೇತ್ರವು ಅತ್ಯಂತ ಹಿಂದುಳಿದ ಪ್ರದೇಶವಾಗಿದ್ದು, ಈ ಭಾಗದ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಹಿತದೃಷ್ಟಿಯಿಂದ ಹೊಸ ಐಟಿಐ ಕಾಲೇಜು ಪ್ರಾರಂಭಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಪಿ.ಟಿ. ಪರಮೇಶ್ವರ ನಾಯ್ಕ (ಕಾರ್ಮಿಕ ರಾಜ್ಯ ಸಚಿವರು)

ಅ) ಹೌದು.

ಆ) ಪ್ರಸ್ತುತ ಬೆಂಗಳೂರು ಜಿಲ್ಲೆಯಲ್ಲಿ 6 ಸರ್ಕಾರಿ, 9 ಅನುದಾನಿತ ಮತ್ತು 67 ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿದ್ದು, ಈ ಮೂಲಕ ಆ ಭಾಗದ ಯುವಜನರಿಗೆ ಕೌಶಲ್ಯ ತರಬೇತಿಯನ್ನು ನೀಡಲಾಗುತ್ತಿದೆ. ಪ್ರಸ್ತುತ ಪುಲಕೇಶಿ ನಗರದಲ್ಲಿ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಪ್ರಾರಂಭಿಸುವ ಪ್ರಸ್ತಾವನೆ ಇರುವುದಿಲ್ಲ.

ಬೆಂಗಳೂರು ನಗರ ಜಿಲ್ಲೆಯ ಸ್ಥಿರಾಸ್ತಿಗಳ ಮಾರುಕಟ್ಟೆಯ ದರಪಟ್ಟಿ

2072(3253); ಶ್ರೀ ಅಖಂಡ ಶ್ರೀನಿವಾಸಮೂರ್ತಿ ಆರ್.

ಅ) ಬೆಂಗಳೂರು ನಗರ ಜಿಲ್ಲೆಯ ಸ್ಥಿರಾಸ್ತಿಗಳ ಅಂದಾಜು ಮಾರುಕಟ್ಟೆ ದರಗಳ ಪರಿಷ್ಕರಣೆಯು ದಿನಾಂಕ: 07.08.2013 ರಿಂದ ಜಾರಿಗೆ ಬಂದಿದ್ದು, ನಗರದ ವಿವಧ ಬಡಾವಣೆಗಳಾದ ಇಂದಿರಾನಗರ, ಕೋರಮಂಗಲ, ಜೆ.ಪಿ.ನಗರ, ಜಯನಗರ ಮತ್ತು ಇತರೆ ಬಡಾವಣೆಗಳ ಸ್ಥಿರಾಸ್ತಿ ಮಾರುಕಟ್ಟೆ ದರಗಳನ್ನು 100 ಅಡಿ ರಸ್ತೆ, 80

ಅಡಿ ರಸ್ತೆ ಮತ್ತು 50 ಅಡಿ ರಸ್ತೆಗಳಿಗೆ ವಿವಿಧ ರೀತಿಯ ಮಾರುಕಟ್ಟೆ ದರಗಳನ್ನು ನಿಗದಿಪಡಿಸಲಾಗಿದ್ದು, ಬನಶಂಕರಿ 6ನೇ ಹಂತ, ವಿಶ್ವೇಶ್ವರಯ್ಯ ಲೇಔಟ್ ಮತ್ತು ಇತರೆ ಖಾಸಗಿ ಬಡಾವಣೆಗಳ ಸ್ಥಿರಾಸ್ತಿಗಳಿಗೆ ಒಂದೇ ಮಾರುಕಟ್ಟೆ ದರವನ್ನು ನಿಗದಿಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ತಾರತಮ್ಯಗಳನ್ನು ನಿವಾರಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳುವುದು?

ಶ್ರೀ ವಿ. ಶ್ರೀನಿವಾಸ್ ಪ್ರಸಾದ್ (ಕಂದಾಯ ಸಚಿವರು)

ಅ) ಬಂದಿದೆ.

ಆ) ಬನಶಂಕರಿ 6ನೇ ಹಂತ, ವಿಶ್ವೇಶ್ವರಯ್ಯ ಲೇಔಟ್ ಮತ್ತು ಇತರೆ ಖಾಸಗಿ ಬಡಾವಣೆಗಳಿಗೆ 2014–15 ನೇ ಸಾಲಿನಲ್ಲಿ ಮಾರ್ಗಸೂಚಿ ಮಾರುಕಟ್ಟೆ ದರ ಪರಿಷ್ಕರಣೆ ಸಮಯದಲ್ಲಿ 100 ಅಡಿ ರಸ್ತೆ, 80 ಅಡಿ ರಸ್ತೆ ಮತ್ತು 50 ಅಡಿ ರಸ್ತೆಗಳಿಗೆ ನಿರ್ದಿಷ್ಟ ದರಗಳನ್ನು ನಿಗದಿಪಡಿಸಲಾಗುವುದು. ಜಯನಗರ ನೋಂದಣಿ ಜಿಲ್ಲೆಯ ಕೆಂಗೇರಿ ಉಪನೋಂದಣಿ ಕಛೇರಿ ವ್ಯಾಪ್ತಿಗೆ ಒಳಪಡುವ ಬನಶಂಕರಿ 6ನೇ ಹಂತದ ಪೈಕಿ 1 ರಿಂದ 4ನೇ ಟಿ ಬ್ಲಾಕ್ ವರಗೆ ಹಾಗೂ ಅದೇ ರೀತಿ ವಿಶ್ವೇಶ್ವರಯ್ಯ ಬಡಾವಣೆ 1 ರಿಂದ 4ನೇ ಬ್ಲಾಕ್‌ಗಳಲ್ಲಿ ಬರುವ 100 ಅಡಿ ರಸ್ತೆ, 60 ಅಡಿ ರಸ್ತೆ, 40 ಅಡಿ ರಸ್ತೆಗಳಿಗೆ ಹಾಗೂ ಖಾಸಗಿ ಬಡಾವಣೆಗಳಿಗೆ 2014–15ನೇ ಸಾಲಿನಲ್ಲಿ ಮಾರ್ಗಸೂಚಿ ಮಾರುಕಟ್ಟೆ ದರ ಪರಿಷ್ಕರಿಸುವ ಸಂದರ್ಭದಲ್ಲಿ ಪ್ರತ್ಯೇಕ ದರಗಳನ್ನು ನಿಗದಿಪಡಿಸಲಾಗುವುದು. ರಾಜಾಜಿನಗರ ನೋಂದಣಿ ಜಿಲ್ಲೆ ನಾಗರಭಾವಿ ಉಪನೋಂದಣಿ ಕಛೇರಿ ವ್ಯಾಪ್ತಿಯಲ್ಲಿರುವ ವಿಶ್ವೇಶ್ವರಯ್ಯ ಲೇಔಟ್‌ಗೆ 5 ರಿಂದ 9 ಬ್ಲಾಕ್‌ಗಳು ಬರುತ್ತಿದ್ದು ಅವುಗಳಲ್ಲಿ ಹಾಯ್ದು ಹೋಗುವ 100 ಅಡಿ, 60 ಅಡಿ ಮತ್ತು 40 ಅಡಿ ರಸ್ತೆಗಳಿಗೆ ಹಾಗೂ ಖಾಸಗಿ ಬಡಾವಣೆಗಳಿಗೆ 2014–15ನೇ ಸಾಲಿನಲ್ಲಿ ಮಾರ್ಗಸೂಚಿ

ಮಾರುಕಟ್ಟೆ ಬೆಲೆ ಪರಿಷ್ಕರಿಸುವ ಸಂದರ್ಭದಲ್ಲಿ ನಿದಿಷ್ಟ ದರಗಳನ್ನು ನಿಗಡಿಪಡಿಸಲಾಗುವುದು.

ಐಟಿಐ ಪ್ರಾಚಾರ್ಯರುಗಳಿಗೆ ಹಿಂಬಡ್ತಿ ನೀಡುವುದು

2073(3443); ಶ್ರೀ ಅಖಂಡ ಶ್ರೀನಿವಾಸಮೂರ್ತಿ ಆರ್.(ಪುಲಕೇಶಿ ನಗರ)

ಅ) ಸರ್ವೋಚ್ಚ ನ್ಯಾಯಾಲಯದ ಆದೇಶದನುಸಾರ "All those persons who are degree holders in the feeder cadre of the Traning Officers shall not be reverted in the meantime" ಇದರಂತೆ "Feeder cadre" ರಿಂದ ಮುಂಬಡ್ತಿ ಪಡೆದ ಪ್ರಾಚಾರ್ಯರುಗಳ ವಿವರಗಳನ್ನು ಒದಗಿಸುವುದು.

ಆ) "Feeder cadre" ನಲ್ಲಿರದೇ ನಿಯಮ ಬಾಹಿರವಾಗಿ ಮುಂಬಡ್ತಿ ಪಡೆದ ಪ್ರಾಚಾರ್ಯರುಗಳಿಗೆ ಹಿಂಬಡ್ತಿ ನೀಡುವ ಪ್ರಕ್ರಿಯೆಯು ಯಾವ ಹಂತದಲ್ಲಿದೆ; ಹಿಂಬಡ್ತಿ ನೀಡುವಲ್ಲಿ ಅನಗತ್ಯ ಕಾಲ ವಿಳಂಬ ಮಾಡುತ್ತಿರುವುದಕ್ಕೆ ಕಾರಣಗಳೇನು; ಇದಕ್ಕೆ ಕಾರಣಕರ್ತರಾದ ಇಲಾಖಾ ಅಧಿಕಾರಿಗಳ ವಿರುದ್ಧ ಸರ್ಕಾರವು ಕೈಗೊಂಡ ಕ್ರಮಗಳೇನು;

ಇ) ಪ್ರಾಚಾರ್ಯರುಗಳಿಗೆ ಹಿಂಬಡ್ತಿ ನೀಡಿದಲ್ಲಿ ತೆರವಾಗುವ ಹುದ್ದೆಗಳಿಗೆ ನಿಯಮಾನುಸಾರ ಅರ್ಹರಿರುವ ತರಬೇತಿ ಅಧಿಕಾರಿಗಳ ಸಂಪೂರ್ಣ ವಿವರಗಳನ್ನು ಒದಗಿಸುವುದು.

ಶ್ರೀ ಪಿ.ಟಿ. ಪರಮೇಶ್ವರ ನಾಯ್ಕ (ಮಾನ್ಯ ಕಾರ್ಮಿಕ ರಾಜ್ಯ ಸಚಿವರು)

ಅ) ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳು 1998 ರಂತೆ ಪ್ರಾಚಾರ್ಯರು ದರ್ಜೆ–2 ಹುದ್ದೆಗೆ ತರಬೇತಿ ಅಧಿಕಾರಿ/ಕಿರಿಯ ತರಬೇತಿ ಅಧಿಕಾರಿ ಹುದ್ದೆಯಿಂದ ವರ್ಗಾವಣೆ ಮೇರೆಗೆ ಶೇ. 33 1/3 ಅನುಪಾತದಂತೆ ಮುಂಬಡ್ತಿ ಪಡೆದ ಪ್ರಾಚಾರ್ಯರ ಪಟ್ಟಿಯನ್ನು ಅನುಬಂಧ–1 ರಲ್ಲಿ ಲಗತ್ತಿಸಿದೆ.